**OS NO. 75/2022**
**PW-1 addl.**
(Sharanaiah)

**<u>ಸಾಕ್ಷಿಯನ್ನು ಇಂದು ದಿನಾಂಕ 24.01.204 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಆರ್. ಎಚ್. ಬಿ ವಾದಿ ಪರ ವಕೀಲರಿಂದ</u>**

ನಾನು ಹುಟ್ಟಿನಿಂದ ಮೊತಕಪಲ್ಲಿಯಲ್ಲಿ ವಾಸ ಇರುತ್ತೇನೆ. ನಾನು ಕೆಎಸ್ ಆರ್ಡಿಸಿ ಚಾಲಕ ಅಂತ ಗುರುಮಿಠಕಲ ಡಿಪ್ಪೋದಲ್ಲಿ ಕತರ್ವ್ಯ ಕಾರ್ಯನಿರ್ವಹಿಸಿ ನಿವೃತನಾಗಿರುತ್ತೇನೆ. ನಾನು ಸರಿ ಸುಮಾರು 29 ವರ್ಷ ಸೇವೆ ಸಲ್ಲಿಸಿರುತ್ತೆನೆ. ನಾನು ಮೊದಲಿಗೆ ರಾಯಚೂರು, ನಾನು ಸೇವಾ ನಿಮಿತ ರಾಯಚೂರುನಲ್ಲಿ ವಾಸವಿದೆ ಎಂದರೆ ಸರಿ. ನಾನು 1986 ರಿಂದ 89 ರವರೆಗೆ ರಾಯಚೂರಿನಲ್ಲಿ ವಾಸವಿದೆನು ಅಲ್ಲಿಂದ ಹೂವಿನಹಡಗಲಿಯಲ್ಲಿ ವಾಸವಿದೆನು. ಹೂವಿನಹಡಗಲ್ಲಿಯಲ್ಲಿ ಮೂರು ವರ್ಷ ವಾಸವಿದ್ದೆ ಅಲ್ಲಿಂದ ಶಹಾಪೂರದಲ್ಲಿ ವಾಸವಿದೆನು, ಶಹಾಪೂರದಲ್ಲಿ 5 ವರ್ಷ ವಾಸ ಇದ್ದೆನು ಅಲ್ಲಿಂದ ಯಾದಗಿರಿಯಲ್ಲಿ 7 ವರ್ಷ ವಾಸ ಇದ್ದೆನು. ಅಲ್ಲಿಂದ ಗುರುಮಿಠಕಲದಲ್ಲಿ ಸೇವಾ ನಿವೃತದಲ್ಲಿ ವಾಸವಿದ್ದೆನು.

ನಾವು ನಮ್ಮ ಕುಟುಂಬದಲ್ಲಿ ಮೂರು ಜನರು ವಾಸವಿದಿದ್ದು ಇತ್ತು. ನನ್ನ ತಂದಗೆ ಮೂವರು ಜನ ಅಣ್ಣ ತಮ್ಮಂದಿರು ಇದ್ದರು. ನಾವು ವಿಭಾಗ ವಾಗಿ ವಾಸಮಾಡಿದ್ದು ಇತ್ತು. ಯಾವ ವರ್ಷ ದಲ್ಲಿ ವಿಭಾಗವಾಗಿರುತ್ತೆವೆ ಎಂದರೆ ಹೇಳಲು ಬರುವುದಿಲ್ಲ. ದಾವಾ ಜಮೀನು ನಮ್ಮ ಚಿಕ್ಕಪ್ಪ 1976 ರಲ್ಲಿ ಖರೀದಿ ಮಾಡಿದ ಜಮೀನು ಇರುತ್ತದೆ. ದಾವ ಜಮೀನು ಕ್ಷೇತ್ರ 11 ಎಕರೆ 11 ಗುಂಟೆ ಇರುತ್ತದೆ. ನಾನಾ ದಾವೆಯನ್ನು 3 ಎಕರೆ 26 ಗುಂಟೆ ಜಮೀನಿಗೆ ಮಾತ್ರ ಸಲ್ಲಿಸಿರುತ್ತೇನೆ. ಸದರಿ ಜಮೀನು ನಾನು ಖರೀದಿ ಮಾಡಿದ ಜಮೀನು ಅಲ್ಲ ಎಂದರೆ ಸರಿ. ಸಾಕ್ಷಿ ಅದನ್ನು ನಮ್ಮ ಚಿಕ್ಕಪ್ಪ ಖರೀದಿ ಮಾಡಿರುವುದಾಗಿ ನುಡಿಯುತ್ತಾರೆ. ನಮ್ಮ ಚಿಕ್ಕಪ್ಪ ಸದರಿ ಆಸ್ತಿಯನ್ನು ನಮಗೆ ಹೇಗೆ ನೀಡಿರುತ್ತಾರೆ ಎಂಬ ಬಗ್ಗೆ ನಾನು ಕಾಗದ ಪತ್ರ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಉತ್ತರ ನೀಡುತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಸುಲೋಚನ ಎಂಬುವರ ಪಶ್ಚಿಮಕ್ಕೆ ನನ್ನ ಜಮೀನು ಉತ್ತರಕ್ಕೆ ಮಣಿಪಾಲ ರೆಡ್ಡಿ ಹಾಗೂ ಇತರರ ದಕ್ಷಿಣಕ್ಕೆ ಸರಕಾರಿ ರಸ್ತೆ ಇರುತ್ತದೆ. ಸದರಿ ಜಮೀನು ತ್ರಿಕೋನ ಆಕಾರದಲ್ಲಿ ಇರುತ್ತದೆ. ದಾವಾ ಆಸ್ತಿಯಲ್ಲಿ ಕೆಲವರು ಮನೆ ಕಟ್ಟಿದು ಇನ್ನು ಕೆಲವರು ಕಲ್ಲು ಹಾಕಿರುತ್ತಾರೆ. ದಾವಾ ಆಸ್ತಿಯಲ್ಲಿ ಒಬ್ಬರು ಮಾತ್ರ ಮನೆಕಟ್ಟಿದು ಇತರರು ಕಲ್ಲು ತಂದು ಹಾಕಿರುತ್ತಾರೆ. ಸದರಿ ಮನೆಯನ್ನು 2000 ಇಸವಿಯ ನಂತರದಲ್ಲಿ ಕಟ್ಟಿರುತ್ತಾರೆ. 2000 ಇಸವಿಯಿಂದ ಇಲ್ಲಿಯವರೆಗೆ ದಾವಾ ಆಸ್ತಿಯಲ್ಲಿ ಬೆಳೆ ಬೆಳೆಯುತ್ತಿಲ್ಲ. ಸರ್ವೆ ನಂಬರ 6 11 ಎಕರೆ 11 ಗುಂಟೆಯಲ್ಲಿ ಈಗಾಲೇ ಜನರು ಮನೆ ಕಟ್ಟಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ 5 ಎಕರೆ 20 ಗುಂಟೆಯಲ್ಲಿ ತಾಂಡಾ ಇರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ 2 ಎಕರೆ ಜಮೀನುದಲ್ಲಿ ಸರಕಾರಿ ಕಟ್ಟಡಲು ಇರುತ್ತಾವೆ ಎಂದರೆ ಸರಿ. ಉಳಿದ ಜಮಿನಿನಲ್ಲಿ

ಸೈಟುಗಳು ಹಾಕಿ ಮನೆಗಳು ಆಗಿರುತ್ತವೆ ಎಂದರೆ ಸರಿ. ಸದರಿ ಮನೆಗಳನ್ನು ಜನರು ಪಂಚಾಯತಿಯಲ್ಲಿ ನೊಂದಣಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಂಟು ಕುರಿತು ಕಂದಾಯ ಇಲಾಖೆಯಿಂದ ಪಾರಮ ನಂಬರ 10 ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಪಾರಮ ನಂಬರ 10 ಈ ದಾವೆಯಲ್ಲಿ ಸಲ್ಲಿಸಿಲ್ಲ. ನಾನು ದಾವಾ ಆಸ್ತಿಗೆ ಕೊನೆಯ ಬಾರಿ 2022 ರಲ್ಲಿ ಹೋಗಿದ್ದು ಇತ್ತು. ನಾನು ಹಾಗೆ ನೋಡಿದಾಗ ಕೆಲವು ಜನರು ಮನೆ ಕಟ್ಟಿದರು ಮತ್ತು ಕೆಲವರು ಕಲ್ಲು ತಂದು ಹಾಕಿದ್ದರು. ಆಗ ನನ್ನಗೆ ನಮ್ಮ ಜಮೀನು ಎಲ್ಲಿ ಬರುತ್ತದೆ ಎಂಬ ಬಗ್ಗೆ ಗೊತ್ತಾಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಉಪ ಸ್ಥಿತಿಯ ಕುರಿತು ಕಂದಾಯ ಇಲಾಖೆ ಯಿಂದ ಸರ್ವೆ ಮಾಡಿದ ದಾಖಲೆ ಈ ದಾವೆಯಲ್ಲಿ ಸಲ್ಲಿಸಿರುತ್ತೇನೆ. ಹಾಗೇ ಸರ್ವೆ ದಾಖಲೆಗಳನ್ನು ಹಾಜರು ಪಡಿಸಿರುವುದಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು 2000 ಇಸವಿಯಿಂದ ದಾವಾ ಆಸ್ತಿಯ ಜಮೀನಿಗೆ ಭೇಟಿ ಕೊಟ್ಟಿಲ್ಲ ಎಂದರೆ ಸರಿ. ದಾವಾ ಸಲ್ಲಿಸಲುವ ವ್ಯಾಜ ಕಾರಣ ದಿನಾಂಕ ನನ್ನ ದಾವೆಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗೆ ಎಂಟನೇ ತಿಂಗಳು 01.08.2022 ರಂದು ಹೋಗಿರುತ್ತೇನೆ. ಹಾಗೇ ದಿಃ 01.08.2022 ರಂದು ದಾವಾ ಆಸ್ತಿಗೆ ಭೇಟಿ ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮನೆ ಕಟ್ಟಿದವರಿಗೆ ನೋಟಿಸ್ಸು ಕೊಟ್ಟಿಲ್ಲ. ಅಲ್ಲಿ 6 ಜನರು ಮನೆ ಕಟ್ಟಿಕೊಂಡಿರುತ್ತಾರೆ. ಸಾಕ್ಷಿ ಒಬ್ಬರು ಮಾತ್ರ ಮನೆ ಕಟ್ಟಿ ಕೊಂಡಿರುವುದಾಗಿ ಈಗ ಪುನಃ ಹೇಳುತ್ತಾರೆ. ಅಲ್ಲಿ 35 ರಿಂದ 40 ಜನರು ಮನೆ ಕಟ್ಟಿಕೊಂಡು ಪಂಚಾಯತಿಯಲ್ಲಿ ನೊಂದಣಿ ಮಾಡಿಕೊಟ್ಟಿರುತತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ರಸ್ತೆ ಮತ್ತು ನಳದ ಸಂಪರ್ಕ ಪಂಚಾಯಿತಿಯವರು ಕೊಟ್ಟಿರುತ್ತಾರೆ ಎಂದರೆ ಸರಿ. ಅಲ್ಲಿ ಜನರಿಗೆ ವಿದ್ಯುತ್ ಕಂಬಗಳ ಮೂಲಕ ವಿದ್ಯುತ ಸಂಪರ್ಕ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ . ಪಂಚಾಯತಿಯವರಿಗೆ ಕಾನುನೂ ಬಂದ ನೋಟಿಸ್ಸು ಕೊಟ್ಟಿರುತ್ತೇನೆ. ಪಂಚಾಯಿುತಿಯವರಿಗೆ ಜನರು ನಮ್ಮ ಜಾಗೆಯಲ್ಲಿ ಕಲ್ಲು ಹಾಕಿರುತ್ತಾರೆ ಎಂದು ಹೇಳಿ ನೋಟಿಸ್ಸು ಕೊಟ್ಟಿರುತ್ತೇನೆ. ಪಂಚಾಯತಿಯವರು ಸದರಿ ನೋಟಿಸ್ಸಿಗೆ ಉತ್ತರ ಕೊಟ್ಟಿಲ್ಲ. ಹಾಗೇ ನೋಟಿಸ್ಸು ಕೊಟ್ಟ ಬಗ್ಗೆ ಈ ದಾವೆಯಲ್ಲಿ ಸಲ್ಲಿಸಿರುತ್ತೇನೆ. ವಾದ ಪತ್ರ ದೊಂದಿಗೆ ಹಾಜರು ಪಡಿಸಿದ ನಕ್ಷ ಸರ್ವೆ ಇಲಾಖೆಯವರು ತಯಾರಿಸಿರುತ್ತಾರೆ ಸದರಿ ದಾಖಲೆಗಳ ಮೇಲೆ ಸರ್ವೆ ಅಧಿಕಾರಿಗಳ ಸಹಿ ಇರುವುದಿಲ್ಲ ಎಂದರೆ ಸರಿ. ನಾನು ಪಂಚಾಯತಿಯವರಿಗೆ ಯಾವುದೇ ನೋಟಿಸ್ಸು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಕಾಶೆಯನ್ನು ನಾನು ಸ್ವತಃ ತಯಾರಿಸಿದ್ದು ನಮ್ಮ ಜಮೀನು ಎಲ್ಲಿ ಇರುತ್ತದೆ ಎಂಬ ಬಗ್ಗೆ ನನ್ನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಕ್ಷಯನ್ನು ಯಾರು ತಯಾರು ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ಉತ್ತರ ನೀಡುತ್ತಿಲ್ಲ. ದಾವಾ ಆಸ್ತಿ ವ್ಯವಸಾಯ ಜಮೀನು ಎಂಬುವುದಾಗಿ ನಾನು ದಾವೆ ಸಲ್ಲಿಸಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಅಲ್ಲಿ ಈಗಾಲೇ ಅಲ್ಲಿ ಈಗಾಲೇ ಜನರು ಮನೆಗಳನ್ನು ಕಟ್ಟಿಕೊಂಡು ವಾಸವಿದ್ದು ಅದು ವಾಸ ಯೋಗ್ಯ ವಾದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾನು ಮಾಲೀಕನು ಇರುವುದಾಗಿ ದಾವಾ ಸಲ್ಲಿಸಿದ್ದು ಖೊಟ್ಟಿ ಇರುತ್ತದೆ ಎಂದರೆ

ಸರಿಯಲ್ಲ. ದಾವಾ ಆಸ್ತಿಯು ನನಗೆ ಹೇಗೆ ಬಂದಿರುತ್ತದೆ ಯಾರಿಂದ ಬಂದಿರುತ್ತದೆ ಎಂಬ ಬಗ್ಗೆ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನಾ ಪ್ರತಿವಾದಿಯವರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಗ್ರಾಮ ಪಂಚಾಯತಿಯನ್ನು ಅವಶ್ಯ ಪಕ್ಷರನಾಗಿ ಸೇಪರ್ಡೆ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಇತ್ತಿಚಿನ ಮುಂದುವರೆದು ಪಹಣಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಹಣಿಯಲ್ಲಿರುವ ಈರಮ್ಮ ಬಸಪ್ಪ ಇವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಜಮೀನ್ನು ಮಾಲೀಕರಿಂದ ಖರೀದಿ ಮಾಡಿ ವಾಸವಿದ್ದು ಆದ್ದರಿಂದ ನನ್ನಗೆ ಯಾವುದೆ ಹಿತ ಹಕ್ಕು ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಎಮ್. ಎಸ್. ಎಸ್. ವಕೀಲರಿಂದ**

ಅನಂತರ ರೆಡ್ಡಿ ಹನುಮ ರೆಡ್ಡಿ ಒಬ್ಬನೇ ಮಗ ಎಂದರೆ ಸರಿ ಹನುಮ ರೆಡ್ಡಿ ತೀರಿಕೊಂಡ ನಂತರ ಅವರ ಆಸ್ತಿಗಳು ಅವರ ಹೆಂಡತಿ ಸುಲೋಚನಮ್ಮ ಇವರಿಗೆ ವರ್ಗವಣೆ ಆಗಿರುತ್ತವೆ ಎಂದರೆ ಸರಿ. ಸದರಿ ಜಮೀನ ಸರ್ವೆ ನಂ 6 ಸುಲೋಚನಮ್ಮ ಇವರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ಸುಲೋಚನಮ್ಮ ಇವರು ದಾವಾ ಆಸ್ತಿಯಲ್ಲಿ ಪಾಟು ಮಾಡಿ ಪ್ರತಿ ವಾದಿ ಮಾರಾಟ ಮಾಡಿರುತ್ತಾರೆ ಎಂದರೆ ಅವರ ಕ್ಷೇತ್ರದಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ ಪ್ರತಿವಾದಿಯರನ್ನು ಸೇರಿಕೊಂಡು ಪಡಿಸ ಬೇರೆಯವರಿಗೂ ಸಹ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವರನ್ನು ಸಹ ಈ ದಾವೆಯಲ್ಲಿ ಅವಶ್ಯಕ ದಾವೆಯನ್ನು ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ.

**(ಪ್ರತಿವಾದಿ ನಂಬರ 1 ಪರ ವಕೀಲರು ಪ್ರತಿವಾದಿ 2 ರಿಂದ 4 ಆರೋಪಿ ಪರ ವಕೀಲರು ಪಾಟೀ ಸವಾಲನ್ನು ಅಳವಡಿಸಿಕೊಳುತ್ತಾರೆ.)**

(ಮರು ವಿಚಾರಣೆ ಇಲ್ಲ)
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/–

ಸಿವಿಲ್ ನ್ಯಾಯಾಧೀಶರು

ಸೇಡಂ.